† ಶ್ರೀ ಎನ್. ರಾಜಯ್ಯ.—ನನ್ನ ಮುಂದೆ ಇರತಕ್ಕ ಅಂಕಿಅಂಶಗಳನ್ನು ನಾನು ಸಭೆಗೆ ಒದಗಿಸಿದ್ದೇನೆ ಮಾನ್ಯ ಸದಸ್ಯರು ಈ ಅಂಕೆ ಸಂಖ್ಯೆಗಳು ತಪ್ಪೆಂದು ರುಜುವಾತು ಮಾಡಿದಲ್ಲಿ ನಾನು ಸಂಬಂಧಪಟ್ಟ ಅಧಿಕಾರಿಗಳಿಂದ ಎಕ್ಸ್‌ಪ್ಲನೇಷನ್ ಕಾಲ್ಪಾರ್ ಮಾಡುತ್ತೇನೆ.

ಶ್ರೀ ವಿ. ಎಂ. ಘಾಡಿ.—ನನ್ನ ಕ್ಷೇತ್ರದಲ್ಲಿ ಒಂದು ಮುಂಗಳವಾರ ಎಂಬ ಗ್ರಾಮಪಂಚಾಯಿತಿ ಇದೆ. ಅಲ್ಲಿ ನಾನು ನೋಡಿದ್ದರಲ್ಲಿ ಆ ಪಂಚಾಯಿತಿ ಸೆಕ್ರೆಟರಿಗಳ ಕಾರ್ಯವನ್ನು ಈ ತಲಾಟಿಗಳು ಮಾಡುವುದಕ್ಕೆ ಸಾಧ್ಯವಾಗಿಲ್ಲ ಇವರಿಗೆ ಅನೇಕರಿಗೆ ಈ ಕೆಲಸದ ಅನುಭವವಿಲ್ಲ. ಹೀಗಾಗಿ ಅನೇಕ ಪಂಚಾಯಿತಿಗಳಲ್ಲಿ ಹಣ ವಸೂಲಿಯಿಲ್ಲದೆ ರ್ಯಾಪ್ಸಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ? ಮತ್ತು ಈ ಸ್ಥಾನಗಳಲ್ಲಿ ಸರಿಯಾದ ಪಂಚಾಯಿತಿ ಸೆಕ್ರೆಟರಿಗಳನ್ನು ಕೂಡಲೇ ನೇಮಕ ಮಾಡುತ್ತೀರಾ ?

ಶ್ರೀ ಎನ್. ರಾಜಯ್ಯ.—ದಕ್ಷರಾದ ನೌಕರರನ್ನು ನೇಮಕ ಮಾಡಿಕೊಳ್ಳಲು ಸರ್ಕಾರವರು ಈಗಾಗಲೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಶ್ರೀ ಬಿ. ಜಿ. ಬಣಕಾರ್.—ವಿಲೇಜ್ ಅಕೌಂಟೆಂಟುಗಳನ್ನು ಪಂಚಾಯಿತಿ ಸೆಕ್ರೆಟರಿಗಳಾಗಿ ನೇಮಕಮಾಡಿಕೊಳ್ಳುವ ಮೊದಲು ಕೆಲವರು ಅಲ್ಲಿ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ಏನು ಮಾಡುತ್ತೀರಿ ?

ಶ್ರೀ ಎನ್. ರಾಜಯ್ಯ.—ಅವರು ರಿಟೈರಾಗಬೇಕು ಇಲ್ಲವೇ ಪ್ರಮೋಷನ್ನಾಗಿ ಹೋಗ ಬೇಕು. ಇಲ್ಲವೆ ಅದಕ್ಕೆ ಸೂಕ್ತ ರೀತಿಯಲ್ಲಿ ರೂಲ್ಸನ್ನು ತಿದ್ದುಪಡಿಮಾಡಬೇಕು. ಅಲ್ಲಿಯ ವರೆಗೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಬಿ. ರಾಮಸವ್ವಿ.—ಅನೇಕ ಜನ ಅಕೌಂಟೆಂಟರುಗಳು ತಮಗೆ ನಿಗದಿ ಮಾಡಿದ ಜಾಗದಲ್ಲಿ ವಾಸ ಮಾಡದೆ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ಇನ್ನಾದರೂ ಕಡ್ಡಾಯ ಮಾಡಿ ಅವರು ತಮಗೆ ನಿಗದಿ ಮಾಡಿದ ಹೆಡ್‌ಕ್ವಾರ್ಟರಿನಲ್ಲೇ ಇರುವಂತೆ ಆಜ್ಞೆ ಮಾಡುತ್ತೀರಾ ?

ಶ್ರೀ ಎನ್. ರಾಜಯ್ಯ.—ನಾನಾಗಲೇ ಈ ದಿಶೆಯಲ್ಲಿ ತೀವ್ರ ಪರಿಶೀಲನೆ ಮಾಡುತ್ತಿದ್ದೇನೆ

ಶ್ರೀ ವಿ. ಎಂ. ಘಾಡಿ.—ತಲಾಟಿಗಳಿಗೆ ಗ್ರಾಮಪಂಚಾಯಿತಿಗಳ ಕೆಲಸದ ಮಾಹಿತಿ ಇಲ್ಲವಾದ್ದರಿಂದ ಇವರಿಗೆ ಈ ವಿಚಾರದಲ್ಲಿ ಒಂದು ತರಬೇತಿ ಕೊಡತಕ್ಕ ವಿಷಯವನ್ನು ಮಾಡುತ್ತೀರಾ ?

ಶ್ರೀ ಎನ್. ರಾಜಯ್ಯ.—ಇದು ಪರಿಶೀಲನಾರ್ಹವಾದ ಸಲಹೆ.

Distribution of Fertilisers in South Kanara District

306. Sri A. G. KODGI (Baindur).—

Will the Minister for Agriculture and Animal Husbandry be pleased to state :—

(*a*) the number of cards distributed for the issue of fertilisers as on 31-7-1974 Talukwise in South Kanara District ;

(*b*) the number of cards yet to be distributed (Talukwise) ;

(*c*) the quantity of nitrogen fertilisers distributed (Talukwise) in South Kanara as on 30-6-1974 and 31-7-1974 ;

(*d*) the quantity available for distribution (Talukwise) as on date ?

Sri N. CHIKKE GOWDA (Minister for Agriculture and Animal Husbandry).—

(*a*) Statement placed on the Table of the House*

(*b*) Statement placed on the Table of the House*

(*c*) Statement placed on the Table of the House*

(*d*) Stock of fertilisers had with Karnataka State Co-operative Marketing Federation and Karnataka State Agro Industries Corporation and private dealers as on 7-8-1974 is as follows :

	K.S.C.M.F	*K.S.A.I.C*	*Private dealers*
		(In tonnes)	
Ammonium sulphate	69	18	2
Urea	462	299	2
Cal. Ammo. Nitrate	88	69	–
Di. Ammo. Phosphate	49	50	–
Ammonium Nitro-phosphate	116	–	–
Muriate of Potash	172	84	150
Mixture	–	–	5
N. P. K. Complex	254	10	5
Super Phosphate	–	–	15
Ammonium Phosphate	–	131	–
Suphala	–	379	85
Factomfos	–	–	62
Total :	1210	1040	186

(Taluk-wise information is not readily available).

ಶ್ರೀ ಎ. ಜಿ. ಕೊಡಗಿ —ಮಾನ್ಯ ಅಧ್ಯಕ್ಷರೇ, ಇಲ್ಲಿ ತಾಲ್ಲೂಕ್ ಮಾಹಿತಿ ದೊರೆಯುವುದಿಲ್ಲ ಎಂದು ಹೇಳಿದ್ದಾರೆ. ಅಂದಮೇಲೆ ನನ್ನ ಉದ್ದೇಶ ನೆರವೇರಿದಂತಾಗಲಿಲ್ಲ. ನಾನು ಯಾವ ಉದ್ದೇಶಕ್ಕಾಗಿ ಈ ಪ್ರಶ್ನೆಯನ್ನು ಕಳುಹಿಸಿದ್ದೇನೋ ಆ ಉದ್ದೇಶ ನೆರವೇರದೆ ಇದ್ದಾಗ ಇನ್ನು ಉಪಪ್ರಶ್ನೆಗಳನ್ನು ಕೇಳಿ ಆಗತಕ್ಕ ಪ್ರಯೋಜನವಾದರೂ ಏನು ?

ಅಧ್ಯಕ್ಷರು.—ಮೊದಲು ಮಾನ್ಯ ಸದಸ್ಯರು ಪ್ರಶ್ನೆಯನ್ನು ಹಾಕಿ ; ನಕ್ಕಾರದವರೇನು ಹೇಳುತ್ತಾರೋ ಕೇಳಬೇಕು.

* Copies placed in the Karnataka Legislature Library *vide* No. 20 dated 30-8-1974.

ಶ್ರೀ ಎ. ಜಿ. ಕೊಡಗಿ.—ಈಗ ರಾಸಾಯನಿಕ ಗೊಬ್ಬರದ ವಿತರಣೆಗೆ ಸಂಬಂಧಿಸಿದ ಕಾರ್ಡುಗಳನ್ನು ಗ್ರಾಮಸೇವಕರ ಮುಖಾಂತರ ರೈತರಿಗೆ ಕೊಡುತ್ತಿದ್ದಾರೆ. ಗ್ರಾಮಸೇವಕರು ಮತ್ತು ವಿಲೇಜ್ ಅಕೌಂಟೆಂಟ್ ಸ್ಥಳಕ್ಕೆ ಹೋಗಿ ಸರ್ವೆ ನಂಬರ್ ದಾಖಲೆ ಮಾಡಿಕೊಂಡು ಬಂದಮೇಲೆ ಗ್ರಾಮಸೇವಕರು ಆ ಕಾರ್ಡಿನಲ್ಲಿ ದನ್ಯತ್ತು ಹಾಕಿಸಿಕೊಂಡು ಗೊಬ್ಬರವನ್ನು ಪಡೆಯುವುದು ರೈತರಿಗೆ ಬಹಳ ಕ್ಲಿಷ್ಟದಾಯಕವಾಗಿದೆ. ಈ ಒಂದು ಪದ್ಧತಿಯನ್ನು ಸರ್ಕಾರದವರು ಏರ್ಪಡಿಸಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾರ್ಡುಗಳು ವಿತರಣೆಯಾಗಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಅದು ತಮ್ಮ ಗಮನಕ್ಕೆ ಬಂದಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಹೋಗಿಲ್ಲ ಎಂದು ನಾನು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತೀರಾ ?

9-00 A.M.

† ಶ್ರೀ ಎನ್. ಚಿಕ್ಕೇಗೌಡ.— ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಲಕ್ಷ ಕಾರ್ಡುಗಳನ್ನು ಕಳುಹಿಸಿದ್ದೇವೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನಾ ತಾಲ್ಲೂಕುಗಳಲ್ಲಿ ಎಂದರೆ ಬೆಳ್ತಂಗಡಿ, ಪುತ್ತೂರು, ಬಂಟ್ವಾಳ, ಕುಂದಾಪುರ, ಸೂಳ್ಯ ಮುಂತಾದ ತಾಲ್ಲೂಕುಗಳಲ್ಲಿ 31-7-1974 ರ ವರೆಗೆ 49742 ಕಾರ್ಡುಗಳನ್ನು ಹಂಚಿದೆ. ಉಳಿದಿರತಕ್ಕ ಕಾರ್ಡುಗಳನ್ನು ಹಂಚುವುದು ನಾನಾ ಕಾರಣಗಳಿಂದ ಸ್ವಲ್ಪ ತಡವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಪ್ರದೇಶದಲ್ಲಿ ನೆರೆಹಾವಳಿಯ ಪರಿಸ್ಥಿತಿ ಇದ್ದುದು ಮತ್ತೊಂದು ವಿಶೇಷ ಪರಿಸ್ಥಿತಿ ಇದೆ. ಇದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲವು ಭಾಗದಲ್ಲಿ ಗೇಣಿದಾರರಿಗೂ ಮತ್ತು ಭೂಮಾಲೀಕರಿಗೂ ವಾದ ವಿವಾದ ಬೇರೆ ಇದೆ. ಸ್ಪಷ್ಟವಾಗಿ ಹೇಳುವುದಾದರೆ ಗೇಣಿ ವಿಷಯಕ್ಕೆ ಸಂಬಂಧಪಟ್ಟ ಪಹಣಿಗಳು ಕೋರ್ಟ್ ಕಚೇರಿಗಳಿಗೆ ಹೋಗಿವೆ. ವಿಲೇಜ್ ಅಕೌಂಟೆಂಟ್ ಮತ್ತು ಗ್ರಾಮಸೇವಕರು ಇಬ್ಬರು ಕಲೆತು ಇರತಕ್ಕ ದಾಖಲೆಯ ಪ್ರಕಾರ ಕಾರ್ಡಿನಲ್ಲಿ ನಮೂದಿಸಿ ಕೊಡಬೇಕು. ಜಮೀನಿನ ವಾದವಿವಾದ ಇರುವ ಕಾಲದಲ್ಲಿ ವಾದಿ ಪ್ರತಿವಾದಿಗಳು ಕಾರ್ಡನ್ನು ಹಂಚಿರುವುದನ್ನೇ ನೆಪವಾಗಿ ದಾಖಲೆಯಾಗಿ ಪಡೆಯತಕ್ಕ ನಿದರ್ಶನಗಳು ಬಂದಿರುವುದರಿಂದ ಕಾರ್ಡುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹಂಚದೇ ಇರುವುದಕ್ಕೆ ಇದು ಮುಖ್ಯ ಕಾರಣ. ಆದ್ದರಿಂದ ಸರ್ಕಾರದವರು ಆದೇಶವನ್ನು ಕೊಟ್ಟಿದ್ದೇವೆ. ಇದನ್ನು ಸ್ಪೆಷಲ್ ಆಗಿ ತೆಗೆದುಕೊಂಡು ಗೇಣಿದಾರರಿಗೆ ಕಾರ್ಡುಗಳನ್ನು ಕೊಡಬೇಕು ಎಂದು ಡೆಪ್ಯುಟಿ ಕಮಿಷನರಿಗೆ ಮತ್ತು ಇರಾಖೆಯ ಅಧಿಕಾರಿಗಳಿಗೆ ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ಆದ್ದರಿಂದ ಎಲ್ಲಾ ಭಾಗಗಳಲ್ಲೂ ರೈತರಿಗೆ ಹಂಚಬೇಕು ಎಂದು ಹೇಳಿರತಕ್ಕದ್ದು ಸ್ಪಷ್ಟವಾಗಿದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಈಗ ದಕ್ಷಿಣ ಕನ್ನಡ ಜಿಲೆ ಯಲ್ಲಿ ಪಹಣಿಯ ವ್ಯತ್ಯಾಸಗಳು ಇವೆ ಯೆಂದು ತಾವು ಒಪ್ಪಿಕೊಂಡಿದ್ದೀರಿ, ಆದ್ದರಿಂದ ತಾವು ಈ ಬಗ್ಗೆ ಅವರಿಗೆ ಸರಿಯಾದ ಇನ್‌ಸ್ಟ್ರಕ್ಷನ್‌ಕೊಟ್ಟು ಭೂಮಿ ಯಾರ ಪೊಜಿಷನ್‌ನಲ್ಲಿದೆ ಅವರಿಗೆ ಕಾರ್ಡು ಕೊಡುವ ಹಾಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ.—ದಾಖಲೆಯ ಜೊತೆಗೆ ಸ್ಥಳದಲ್ಲಿ ಅಲ್ಲಲ್ಲೇ ವಿಚಾರ ಮಾಡಿ ನಿಜವಾದ ಗೇಣೀದಾರರಿಗೆ ಕಾರ್ಡು ಕೊಡುವಂತೆ ಹೇಳಿದೆ. ಈ ಗೊಬ್ಬರದ ವಿತರಣೆಯ ಕಾರ್ಡಿನಿಂದಲೇ ಯಾರೂ ತಮ್ಮ ಹಕ್ಕನ್ನು ಸಿಂಧು ಮಾಡುವುದಕ್ಕೆ ಅವಕಾಶ ಇಲ್ಲ. ರೈತರಿಗೆ ಗೇಣೀದಾರರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ದಾಖಲೆಯ ಜೊತೆಗೆ ಅಲ್ಲಲ್ಲೇ ಸ್ಥಳದಲ್ಲಿ ವಿಚಾರಮಾಡಿ ನಿಜವಾದ ಗೇಣೀದಾರರಿಗೆ ಕಾರ್ಡನ್ನು ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಪಿ. ಕಕ್ಕಿಲಾಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 49,742 ಕಾರ್ಡುಗಳನ್ನು ವಿತರಣೆ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಒಟ್ಟು ಅಲ್ಲಿಗೆ ಕಳುಹಿಸಿದ್ದು ಒಂದು ಲಕ್ಷ ಕಾರ್ಡುಗಳು. ಆದರೆ ಇದುವರೆಗೆ 49 ಸಾವಿರ ಚಿಲ್ಲರೆ ಕಾರ್ಡುಗಳನ್ನು ಮಾತ್ರ ಹಂಚಿದ್ದಾರೆ ಉಳಿದದ್ದು ಹಂಚಿಲ್ಲ. ಇದಕ್ಕೆ ಕಾರಣ ಗೇಣೀದಾರರಿಗೆ ಈ ಕಾರ್ಡುಗಳನ್ನು ಹಂಚುವಾಗ ಕೆಲವು ವ್ಯತ್ಯಾಸಗಳನ್ನು ಮಾಡಿದ್ದಾರೆ. ಯಾರು ವರ್ಗದಾರರು ಇದ್ದಾರೆಯೋ ಅಂಥವರಿಗೆ ಮಾತ್ರ ಕಾರ್ಡುಗಳನ್ನು ಹಂಚಿದ್ದಾರೆ. ಬಡ ರೈತರಿಗೆ ಕಾರ್ಡುಗಳು ಹಂಚಿಕೆಯಾಗಿಲ್ಲ. ಆದ್ದರಿಂದ ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿ ಗೇಣಿದಾರರಿಗೆ ಬಡವರಿಗೆ ಈ ಕಾರ್ಡುಗಳನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ನಿಜವಾದ ಗೇಣೀದಾರರು ಯಾರು ಇದ್ದಾರೆ ಅವರಿಗೆ ಗೊಬ್ಬರ ವನ್ನು ದೊರಕಿಸಿ ಕೊಡುವುದಕ್ಕೆ ಅವಕಾಶ ಮಾಡಬೇಕೆಂದು ನಾನು ಆದೇಶವನ್ನು ಕೊಡುತ್ತೇನೆ. ಆ ಬಗ್ಗೆ ವಿಶೇಷ ಅಧಿಕಾರಿಯನ್ನು ಕಳುಹಿಸಿ ತನಿಖೆ ಮಾಡಿಸುತ್ತೇನೆ.

ಶ್ರೀ ಎ. ಪಿ. ಕೊಡಗಿ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಆವಾಸ್ತವಿಕವಾದ ಉತ್ತರ ವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಉತ್ತರ ವ್ಯವಹಾರಿಕವಾಗಿಲ್ಲ. ಗ್ರಾಮಸೇವಕರಿಗೆ ಯಾರು ಯಾರು ಎಷ್ಟು ಭೂಮಿಯನ್ನು ಸಾಗು ಮಾಡುತ್ತಾರೆ, ಯಾರು ಯಾರು ಗೇಣೀದಾರರು ಎನ್ನುವ ವಿವರಗಳು ತಿಳಿದಿರುವುದಿಲ್ಲ. ವಿಲೇಜ್ ಅಕೌಂಟೆಂಟ್‌ರುಗಳು ಸಾಗುಮಾಡಿದ ದಾಖಲೆ ಯನ್ನು ಪಡೆದು ಇಬ್ಬರೂ ಸೇರಿ ಈ ಕಾರ್ಡುಗಳನ್ನು ಹಂಚತಕ್ಕ ವ್ಯವಸ್ಥೆ ಏನಿದೆ ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ.—ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ವಿಲೇಜ್ ಅಕೌಂಟೆಂಟ್ ಮತ್ತು ಗ್ರಾಮಸೇವಕರು ಇಬ್ಬರೂ ಸೇರಿ ಹಾಲಿ ಇರತಕ್ಕ ಪಹಣಿ ಲೆಕ್ಕದ ಪ್ರಕಾರ ನೋಡಿಕೊಂಡು ಆ ಕಾರ್ಡಿಗೆ ಇಬ್ಬರೂ ಸಹಿ ಹಾಕಿ ರೈತರಿಗೆ ಕಾರ್ಡನ್ನು ಕೊಡಬೇಕು ಎಂದು ಮಾಡಿದ್ದೇವೆ. ರೈತರು, ಗೇಣೀದಾರರು ಈ ಕಾರ್ಡನ್ನು ತಗೆದುಕೊಳ್ಳುವುದಕ್ಕೆ ಪದೇ ಪದೇ ಹೋಗಬೇಕಾದ ಪ್ರಮೇಯ ಇಲ್ಲ. ಒಂದುವೇಳೆ ಗ್ರಾಮದಲ್ಲಿ ವಿಲೇಜ್ ಅಕೌಂಟೆಂಟ್, ಗ್ರಾಮ ಸೇವಕರು ಇಲ್ಲದೆ ಹೋದರೆ ಮೇಲ್ಪಟ್ಟ ರೆವಿನ್ಯೂ ಅಧಿಕಾರಿಯಾಗಲೀ ವ್ಯವಸಾಯ ಇಲಾಖೆಯ ಅಧಿಕಾರಿಯಾಗಲೀ ಈ ಕಾರ್ಡನ್ನು ಬರೆದು ಪ್ರತಿಯೊಂದು ತಾಲ್ಲೂಕುಗಳಲ್ಲಿ ಆಯಾ ಸ್ಥಳದಲ್ಲಿ ಪಂಚಾಯಿತಿಗೆ ಸೇರದಂತಹ ಗ್ರಾಮಗಳಲ್ಲಿ ಟಾಂ ಟಾಂ ಮೂಲಕ ಪ್ರಚಾರ ಮಾಡಿ ಮನೆಯ ಬಾಗಿಲಿಗೆ ಈ ಕಾರ್ಡುಗಳನ್ನು ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ.

Repairs to Causeway across Markandeya River in Bangarpet Taluk

329. **Sri K. M. DORESWAMY NAIDU** (Bethamangala).—

Will the Minister of State for Minior Irrigation be pleased to state :—

(*a*) whether it has come to the notice of the Government that the estimates regarding repairs to the cause way across Markandeya river near Naganahalli of Boodikote Hobli, Bangarpet Taluk was prepared 7–8 years ago ;

(*b*) the reasons for not taking up the said work for the last 7–8 years ?

Sri S. B. NAGARAL (Minister of State for Minor Irrigation).—

(*a*) Yes.

(*b*) The work was held up as the same was under technical invistigation and the same has been ordered to be taken up after the spot inspection by the Superintending Engineer.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಈ ಕಾಮಗಾರಿಯು ತಾಂತ್ರಿಕ ಪರಿಶೀಲನೆಯಲ್ಲಿ ಇದ್ದುದರಿಂದ ನಿಲ್ಲಿಸಲಾಗಿತ್ತು ಹಾಲಿ ಸೂಪರಿಟೆಂಡಿಂಗ್ ಇಂಜನಿಯರ್ ಅವರ ಸ್ಥಳ ಪರಿಶೀಲನೆಯ ನಂತರ ಕಾಮಗಾರಿ ಪ್ರಾರಂಭಿಸಲು ಆದೇಶ ನೀಡಲಾಗಿದೆ ಎಂದು ಹೇಳಿದ್ದೀರಿ ಈ ಕೆಲಸವನ್ನು ಪೂರ್ತಿ ಮಾಡಿಕೊಡುವುದಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತದೆ ?